<u>ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ</u>

<u>ದಂಡಾಧಿಕಾರಿಗಳ ನ್ಯಾಯಾಲಯ ದಲ್ಲಿ, ಆಲೂರು .</u>

**<u>ಸಿ.ಸಿ.ಸಂಖ್ಯೆಃ 1330/21</u>**

| | | |
|---|---|---|
| ಸಾಕ್ಷಿದಾರರ ಹೆಸರು | ಶೃತಿ | ಸಿ.ಡಬ್ಲ್ಯೂಃ 1 |
| ಗಂಡನ / ತಂದೆ ಹೆಸರು | ಕೃಷ್ಣಮೂರ್ತಿ | ಪಿ.ಡಬ್ಲ್ಯೂಃ 1 |
| ವಯಸ್ಸು | 33 ವರ್ಷ | |
| ಉದ್ಯೋಗ | ಮನೆಕೆಲಸ | |
| ವಾಸಸ್ಥಳ | ಬೈರಾಪುರ | |

ಪ್ರಮಾಣ ವಚನ ಬೋಧಿಸಲಾಯಿತು.

ದಿಃ 18.09.2025

**<u>ಮುಖ್ಯ ವಿಚಾರಣೆಃ ಸಸಅ ರಿಂದ</u>**

ಚಾಸಾ 2 ಮತ್ತು 3 ರವರ ಪರಿಚಯ ಇರುತ್ತದೆ. ಆರೋಪಿ ನನ್ನ ಮೈದುನ. ದಿ.26.08.21 ರಂದು ಮ.1 ಗಂಟೆಗೆ ಆರೋಪಿ ಮತ್ತು ನನ್ನ ಅತ್ತೆ ಜಯಮ್ಮ ಮತ್ತು ಜವರಯ್ಯ ರವರು ಮನೆ ಕಟ್ಟಬೇಕು ಮನೆ ಖಾಲಿ ಮಾಡು ಎಂದು ಗಲಾಟೆ ಮಾಡಿದರು. ನಾನು ಹೋಗುವುದಿಲ್ಲ ಎಂದು ಹೇಳಿದಾಗ ನಮ್ಮ ಅತ್ತೆ ಮಾವ ನನ್ನ ಕೂದಲು ಹಿಡಿದು ಎಳೆದಾಡಿ ಸೀಮೆ ಎಣ್ಣೆ ಹಾಕಿ ಸುಡುವುದಾಗಿ ಹೆದರಿಸಿರುತ್ತಾರೆ ಮತ್ತು ಕಲ್ಲಿನಿಂದ ನನ್ನ ತಲೆ

ಜೆಜ್ಜಿ ಮೈಕೈಗೆ ಹಲ್ಲೆ ಮಾಡಿರುತ್ತಾರೆ. ಆರೋಪಿ ಯಾರು ಇಲ್ಲದ ಸಮಯದಲ್ಲಿ ನನಗೆ ಕೋ ಆಪರೇಟ್ ಮಾಡು ಎಂದು ಹೇಳಿರುತ್ತಾರೆ.

ನನ್ನ ತಾಳಿಯನ್ನು ಕಿತ್ತು ಹೊಡೆದಿರುತ್ತಾರೆ. ನನ್ನ ಮಕ್ಕಳನ್ನು ಕರೆದುಕೊಂಡು ಹೋಗಿ ಸುಧಾರಿಸಿಕೊಂಡು ಆಲೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಸಾಕ್ಷಿ ದೂರಿನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೋಲೀಸರು ಘಟನಾ ಸ್ಥಳಕ್ಕೆ ಬಂದು ಕಲ್ಲನ್ನು ತೆಗೆದುಕೊಂಡು ಹೋಗಿರುತ್ತಾರೆ. ಆಗ ಚಾಸಾ 4 ಮತ್ತು 5 ರವರು ಇದ್ದರು ಮತ್ತು ಭಾವಚಿತ್ರ ತೆಗೆದಿರುತ್ತಾರೆ. ಸಾಕ್ಷಿ ಮಹಜರ್ ನಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಕಲ್ಲನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಮು.ಮಾ. 1 ಎಂದು ಗುರುತಿಸಲಾಯಿತು. ನಂತರ ಪೊಲೀಸರು ಸಕಲೇಶಪುರ ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿ ನ್ಯಾಯಾಲಯದ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ 5 ಎಂದು ಸಾಕ್ಷಿ ಸಹಿಯನ್ನು ನಿಪಿ 5ಎ ಎಂದು ಗುರುತಿಸಲಾಯಿತು. ಪೊಲೀಸರಿಗೆ ಮರುಹೇಳಿಕೆ ನೀಡಿರುವುದಿಲ್ಲ.

(ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಶ್ರೀಮತಿ ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಆಲೂರು .